**ಪ್ರಿಯಕರ:** ಪ್ರಿಯೆ, ನಿನಗಾಗಿ ನನ್ನ ಆಸ್ತಿಯೆಲ್ಲವನ್ನು ನಮ್ಮಪ್ಪನಿಗೇ ಬಿಟ್ಟು ಬಂದಿದ್ದೇನೆ.
**ಪ್ರೇಯಸಿ:** ಒಳ್ಳೆಯದೇ ಆಯ್ತು ಬಿಡಿ. ಅವರ ಮೊಬೈಲ್ ನಂಬರ್ ಕೊಡಿ!

***

**ಮಗ:** ಅಪ್ಪ, ಮಷಿನ್ ಗನ್‌ಗೂ, ಟ್ಯಾಂಕರ್‌ಗೂ ವ್ಯತ್ಯಾಸ ಏನು?
**ತಂದೆ:** ನನಗೂ ನಿಮ್ಮ ಅಮ್ಮನಿಗೂ ಇದ್ದಷ್ಟೇ ವ್ಯತ್ಯಾಸ. ನಾನು ಇದ್ದಲ್ಲೇ ರೇಗಾಡುವ ಮಷಿನ್ ಗನ್, ಎಲ್ಲ ವಿಷಯಕ್ಕೂ ನುಗ್ಗಿ ಹೋಗಿ ಧ್ವಂಸ ಮಾಡುವ ನಿಮ್ಮ ತಾಯಿ ಟ್ಯಾಂಕರ್ ಕಣೋ!

***

**ಈತ:** ನಮ್ಮ ಬಾಸ್ ಎಷ್ಟು ಸೋಮಾರಿ ಅಂದ್ರೆ ಅವರು ಲಿಫ್ಟ್‌ನಲ್ಲಿ ಹೋಗುವಾಗಲೂ ಒಬ್ಬರು ಸಹಾಯಕ್ಕೆ ಇರಬೇಕು.
**ಆತ:** ಏಕೆ ಇರಬೇಕು?
**ಈತ:** ಲಿಫ್ಟ್ ಬಟನ್ ಒತ್ತೋಕೆ!

***

**ಪೊಲೀಸ್:** ನಿಮ್ಮ ಮನೆಯಲ್ಲಿ ಮರಗೆಲಸದವನೇ ಕಳ್ಳತನ ಮಾಡಿದ್ದಾನೆ ಅಂತ ಹೇಳ್ತಾ ಇದ್ದೀರಲ್ಲ, ಅದಕ್ಕೆ ಖಾತ್ರಿ ಏನು?
**ಈತ:** ಕಿಟಕಿ ಮುರಿದು ಕಳ್ಳತನ ಮಾಡಿ ಹೋಗುವಾಗ ಕಿಟಕಿ ರಿಪೇರಿ ಮಾಡಿ ಹೋಗಿದ್ದಾನೆ ಸರ್!

***

**ಭಕ್ತ:** ದೇವರೇ 30 ಸಾವಿರ ರೂಪಾಯಿ ಸಂಬಳಕ್ಕಾಗಿ ಇಡೀ ತಿಂಗಳು ಕಾಯುವುದಕ್ಕಾಗುವುದಿಲ್ಲ. ಹದಿನೈದು ದಿನಕ್ಕೊಮ್ಮೆ ಮಾಡಿಬಿಡು!
**ದೇವರು:** ತಥಾಸ್ತು. ಹದಿನೈದು ದಿನಕೊಮ್ಮೆ ಅರ್ಧ ಸಂಬಳ ಸಿಗುವಂತಾಗಲಿ!

***

**ಪ್ರೇಯಸಿ:** ನನಗಾಗಿ ಪ್ರಾಣ ಬಿಡುವುದಕ್ಕೆ ನೀನು ಸಿದ್ಧ ತಾನೆ?
**ಪ್ರಿಯಕರ:** ಖಂಡಿತ, ಇಲ್ಲ.
**ಪ್ರೇಯಸಿ:** ಏಕೆ?
**ಪ್ರಿಯಕರ:** ನನ್ನದು ಅಮರ ಪ್ರೇಮ, ಅದರಂತೆ ನನ್ನ ಪ್ರಾಣವೂ!

***

**ಕಿಟ್ಟು:** ಚಂದ್ರು , ನೀನು ಕಾರು ಓಡಿಸುವಾಗ ನಿನ್ನ ಹೆಂಡತಿಯನ್ನು ಪಕ್ಕದಲ್ಲಿ ಕೂರಿಸಿಕೊಳ್ಳುವುದಿಲ್ಲ ಏಕೆ?
**ಚಂದ್ರು:** ಅವಳು, 'ರೀ... ನನ್ನ ಸೀರೆ ಚೆನ್ನಾಗಿದೆಯಾ, ಮ್ಯಾಚಿಂಗ್ ಬ್ಲೌಸ್ ಸರಿಯಿದೆಯಾ' ಅಂತೆಲ್ಲ ಕೇಳ್ತಾನೆ ಇರ್ತಾಳೆ. ಅದಕ್ಕೆ!

***

**ಪತಿ:** ನಾನು ಇತ್ತೀಚೆಗೆ ದಿನಾಲೂ ಕುಡಿದು ಬಂದ್ರೂ ಏನೂ ಕೇಳ್ತಿಲ್ವಲ್ಲಾ?
**ಪತ್ನಿ:** ನೀವು ಲೈಫ್ ಇನ್ಸುರೆನ್ಸ್ ಮಾಡಿರುವ ವಿಷಯ ಗೊತ್ತಾಯ್ತು!

***

**ಪತ್ರಕರ್ತ:** ನೀವು ಓದುವುದನ್ನು ಬಿಟ್ಟು, ನಟಿಯಾಗುವುದಕ್ಕೆ ಕಾರಣ?
**ನಟಿ:** ಹೆಸರು ಗಳಿಸಿ ಯಾವುದಾದರೂ ಪಕ್ಷ ಸೇರಿ ಮಂತ್ರಿಯಾಗಲು!



ಸರ್ಕಾರ ಸಾಕಷ್ಟು ಸಂಖ್ಯೆಯಲ್ಲಿ ಪಶುವೈದ್ಯರನ್ನು ನೇಮಕ ಮಾಡದಿದ್ರೆ ಇನ್ನೇನಾಗುತ್ತೆ ಹೇಳಿ..

***

**ಲೇಖಕ:** ಮೂರು ತಿಂಗಳ ಹಿಂದೆ ನನ್ನ ಪುಸ್ತಕ ಬಿಡುಗಡೆ ಮಾಡಿದಾಗ ನನ್ನ ಪುಸ್ತಕ ನೋಡಿ ಹೇಳ್ತೀನಿ ಅಂದಿದ್ರಿ. ಹೇಗಿದೆ ಸರ್?
**ಈತ:** ನೀವೇ ಮಾತಾಡಿಸಿದ್ದು ಒಳ್ಳೆಯದು ಆಯ್ತು. ಅಂದಹಾಗೆ ನಿಮ್ಮ ಪುಸ್ತಕದ ರಕ್ಷಾಪುಟ ಚೆನ್ನಾಗಿದೆ, ಹಾಗೆಯೇ ಪ್ರಿಂಟಿಂಗ್‌ಗೂ ಉಪಯೋಗಿಸಿರುವ ಕಾಗದ ಎಲ್ಲವೂ ಚೆನ್ನಾಗಿದೆ! ಕಂಟೆಂಟ್ ಬಗ್ಗೆ ಕೇಳಲೇಬೇಡಿ. ಯಾಕಂದ್ರೆ ಪುಸ್ತಕ ಓದುವುದಂದ್ರೆ ನನಗೆ ಅಲರ್ಜಿ.

***

**ಆತ:** ನೀವು ಸುಲಭವಾಗಿ ನಿದ್ದೆ ಮಾಡುವುದಕ್ಕೆ ಏನು ಮಾಡುತ್ತೀರಿ?
**ಈತ:** ನೀನು ಮಾಡಿರುವ ಭಾಷಣವನ್ನು ರೆಕಾರ್ಡ್ ಮಾಡಿಕೊಂಡಿದ್ದೇನೆ, ಅದನ್ನು ಹಾಕಿಕೊಂಡರೆ ಸಾಕು!

***

**ರಂಗ:** ಶೀನ, ಎರಡು ವರ್ಷದ ಹಿಂದೆ ಇದೇ ಡಾಕ್ಟರ್ ನಿನ್ನ ಹೆಂಡತಿ ಪ್ರಾಣ ಉಳಿಸಿದ್ದು.



ನಾವು ಕುಕ್ಕರ್ ತಯಾರಿಸೋರು ಅಲ್ಲ ! ಫ್ಲಾಸ್ಕ್ ತಯಾರಿಸುವವರು!

**ಶೀನ:** ಡಾಕ್ಟರ್‌ಗಳು ಒಮ್ಮೊಮ್ಮೆ ತಪ್ಪು ಮಾಡ್ತಾರೆ ಅಂತಾರಲ್ವಾ, ಅದು ಇಂಥವರನ್ನು ನೋಡಿಯೇ ಇರಬೇಕು.

***

**ಮಾಲೀಕ:** ಮರ ಹತ್ತಿ ಕಳ್ಳತನದಿಂದ ಹಣ್ಣು ಕೀಳ್ತಾ ಇದ್ದೀಯಾ, ನಡೆ ನಿಮ್ಮಪ್ಪನನ್ನು ತೋರಿಸು.
**ಹುಡುಗ:** ನಮ್ಮಪ್ಪ ಕೂಡ ಈ ತೋಟದಲ್ಲಿಯೇ ಹಣ್ಣು ಕೀಳ್ತಾ ಇದ್ದಾರೆ ಸ್ವಾಮಿ!

***

**ಮಾರಾಟಗಾರ:** ನೋಡಮ್ಮ, ನಿಮ್ಮಲ್ಲಿರುವ ಹಳೆಯದಕ್ಕೆ ನಾವು ಹೊಸದನ್ನು ಕೊಡ್ತೇವೆ.
**ಆಕೆ:** ಹೌದಾ, ಹಾಗಾದರೆ ಇನ್ನೆರಡು ಗಂಟೆ ಬಿಟ್ಟುಕೊಂಡು ಬರುತ್ತೀರಾ?
**ಮಾರಾಟಗಾರ:** ಯಾಕಮ್ಮಾ?
**ಆಕೆ:** ಆಗ ನಮ್ಮ ಯಜಮಾನರು ಬಂದಿರುತ್ತಾರೆ!

***

**ಗೆಳೆಯ:** ಅಲ್ಲ ಗೋಪಾಲ, ನೀನು ಈಗ ತಾನೇ ವಕೀಲ ಆಗಿದ್ದೀಯ. ಮನೆ ಮುಂದೆ ಇಷ್ಟೊಂದು ಹಳೇ ಬೋರ್ಡ್ ಹಾಕಿದ್ದೀಯಲ್ಲೊ?
**ಗೋಪಾಲ:** ಅದಾ... ನಾನು ಸೀನಿಯರ್ ಲಾಯರ್ ಅಂತ ತೋರಿಸಿಕೊಳ್ಳೋಕೆ.

***

**ಸಾವಿತ್ರಮ್ಮ:** ತಾಯಮ್ಮ, ನಿಮ್ಮ ವ್ಯಾನಿಟಿ ಬ್ಯಾಗ್‌ನಲ್ಲಿ ನಿಮ್ಮವರ ಹಲ್ಲು ಸೆಟ್ ಇದೆ.
**ತಾಯಮ್ಮ:** ಅದಾ... ಮನೆಯಲ್ಲಿ ಇವತ್ತು ಚಕ್ಕುಲಿ ಮಾಡಿದ್ದೀನಿ ಸಾವಿತ್ರಿ. ಅದಕ್ಕೆ!

***

**ರಾಘು:** (ಮೊಬೈಲ್‌ನಲ್ಲಿ) ಹಲೋ, ನಾಣಿ ಒಂದು ವಿಷಯ ಹೇಳಬೇಕಿತ್ತು. ಅದಕ್ಕೆ ಫೋನ್ ಮಾಡಿದೆ.
**ನಾಣಿ:** ಹೇಳು ಯಾವ ವಿಷಯ?
**ರಾಘು:** ಇವತ್ತು ಯಾವುದೇ ಕಾರಣಕ್ಕೂ ಮನೆಯಿಂದ ಹೊರಗೆ ಬರಬೇಡ.
**ನಾಣಿ:** ಯಾಕೆ?
**ರಾಘು:** ನಾಣಿ, ನಮ್ಮ ಬಡಾವಣೆಯಲ್ಲಿರುವ ಹುಚ್ಚರನ್ನೆಲ್ಲ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರಂತೆ!

***

**ಹೆಂಡತಿ:** ರೀ... ಗಂಡು ಅನ್ನಿಸಿಕೊಂಡವರು, ಮನೆ ಜವಾಬ್ದಾರಿ ಬಿಟ್ಟು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಸರಿಯಾದ ಎರಡು ಕಾರಣಗಳನ್ನು ಹೇಳಿ?
**ಗಂಡ:** ಎರಡು ಕಾರಣಗಳೇಕೆ? ಒಂದೇ ಸಾಕು.
**ಹೆಂಡತಿ:** ಏನದು?
**ಗಂಡ:** ನಿನ್ನಂಥವಳನ್ನು ಮದುವೆಯಾದರೆ, ಇನ್ನು ಯಾವುದೇ ದಾರಿ ಕಾಣದೆ ಆತ್ಮಹತ್ಯೆಗೆ ಶರಣಾಗುವುದೊಂದೇ ಗತಿ!

***

**ಆತ:** ಹೆಂಗಸರು, ದೇವರಲ್ಲಿ 'ನನ್ನವರೇ ಏಳೇಳು ಜನ್ಮಕೂ ಗಂಡನಾಗಿರಲಿ' ಅಂತ ಕೇಳ್ಕೋತಾರೆ. ಏಕೆ?
**ಈತ:** ಈ ಜನ್ಮದಲ್ಲಿ ಪಳಗಿಸಿಕೊಂಡಿರುತ್ತಾರೆ, ಮುಂದಿನ ಜನ್ಮಗಳಲ್ಲೂ ಸುಲಭವಾಗಿ ಪಳಗಿಸಬಹುದಂತ!

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ